ಕಾಲ ಆದರೂ ನೀನು ನನ್ನ ಅಂಗಡಿಯನ್ನೊಂದು ಬಿಟ್ಟು ಹೋಗಬೇಡ, ಅವನೂ ಒಂದಲ್ಲಾ ಒಂದು ದಿನ ದಾರಿಗೆ ಬರುತ್ತಾನೆ.

***

ಸುಧಾಕರ ಊಹಿಸಿಕೊಂಡದ್ದಕ್ಕಿಂತ ದೊಡ್ಡ ಅಪಾಯಕಾರಿ ಯೋಚನೆ ಆಗಲೇ ಪ್ರದೀಪನ ತಲೆಗೆ ಬಂದಿತ್ತು. ಯಾವುದೋ ಇಟಾಲಿಯನ್ ಮಾಫಿಯಾ ದೊರೆ ಕಲ್ಲುಗಳಿಂದಲೇ ತನ್ನ ಮನೆಯನ್ನು ನಿರ್ಮಿಸಿಕೊಂಡಿದ್ದಾನೆಂದೂ ಅದಕ್ಕೆ ವಿಶೇಷ ಈಜುಕೊಳಕ್ಕೆ ಭಾರತದಲ್ಲಿ ಹೇರಳವಾಗಿರುವ ಬ್ರಿಟೀಷ್ ಬಂಗಲೆಯ ಕಲ್ಲುಗಳು ಬೇಕಾಗಿವೆಯೆಂದೂ ಓದಿ ತಿಳಿದುಕೊಂಡಿದ್ದ. ಯಾವುದೋ ಆಸ್ಪತ್ರೆಯ ಕಲ್ಲುಗಳನ್ನು ಹೊರಬೇಕಾಗಿಲ್ಲ, ತನ್ನ ಮೆಡಿಕಲ್ ಸ್ಟೋರ್‌ನ ಕಲ್ಲುಗಳು ಸಾಕು ಬೇಕಾದಷ್ಟಿವೆ ಅಂತ ಗೊತ್ತಾಗಿತ್ತು. ಹಾಗಾಗಿ ಒಳಗಿನ ಕಲ್ಲುಗಳನ್ನು ಹೇಗೋ ಒಂದೊಂದನ್ನನೇ ಕಿತ್ತು ಅಡಗಿಸಿಟ್ಟರೆ ರಾತ್ರಿ ಹೊತ್ತು ಸಾಗಿಸಿಬಿಡಬಹುದು ಅಂತ ಯೋಜನೆ ಮಾಡಿಕೊಂಡಿದ್ದ. ಅದಕ್ಕಾಗಿ ಕೆಲವರನ್ನು ಕಮಿಶನ್ ಆಮಿಷ ಒಡ್ಡಿ ಗೊತ್ತು ಮಾಡಿದ್ದ.

ಹಳೆಯದಾಗಿ ಕಪ್ಪಾಗಿರುವ ಕಲ್ಲುಗಳನ್ನು ಕ್ಲೀನ್ ಮಾಡಿಸಬೇಕು ಅಂತ ತನ್ನಷ್ಟಕ್ಕೆ ತಾನೇ ಘೋಷಣೆ ಮಾಡಿ, ನಾಲ್ಕಾರು ಜನರನ್ನು ಮೆಡಿಕಲ್ ಸ್ಟೋರ್‌ಗೆ ಒಂದು ಶನಿವಾರ ಕರೆಸಿಬಿಟ್ಟ ದಿನವೇ ರಾಹುಲನಿಗೆ ಸರಿಯಾಗಿ ಮನೆಯಿಂದ ಫೋನು ಬಂದುಬಿಟ್ಟಿತು.

ಫೋನು ಮಾಡಿದ ರಾಜೀವಪ್ಪ ನಾಟುವಂತಹ ಬಾಣವನ್ನೇ ಪ್ರಯೋಗ ಮಾಡಿದ್ದ ಅಮ್ಮನಿಗೆ ತುಂಬ ಹುಷಾರಿಲ್ಲ, ಬೇಗ ಎದ್ದು ಬಾ!

ರಾಹುಲ ಮನೆಗೆ ಬಂದಾಗ ಪೂರ್ವಹುನ್ನಾರದಂತೆ ಮೂವರು ಅಣ್ಣಂದಿರೂ ಮನೆಯಲ್ಲಿದ್ದರು. ರಾಹುಲನನ್ನು ಬರಮಾಡಿಕೊಂಡಿದ್ದು ಸ್ವತಃ ಅಮ್ಮ. ತನ್ನ ಕಾಯಿಲೆ ಹೆಸರಲ್ಲಿ ಮಗನನ್ನು ಕರೆಸಿಕೊಂಡ ವಿಷಯ ಸ್ವತಃ ಅಮ್ಮನಿಗೂ ಗೊತ್ತಿರಲಿಲ್ಲ. ತನ್ನನ್ನು ಸಿಕ್ಕಿಹಾಕಿಸಲಾಗುತ್ತಿದೆ ಅಂತ ಖಾತ್ರಿಯಾಗಿ ಅಡುಗೆ ಮನೆಯಲ್ಲಿ ಅಮ್ಮನ ಹತ್ತಿರ ಜಗಳಕ್ಕೆ ಇಳಿದ. ಅಲ್ಲಿಂದ ಶುರುವಾಗಿದ್ದು ಹೀಗೆ ಮೆಡಿಕಲ್ ಹೆಲ್ಪರ್ ಆಗಿದ್ದರೆ ಏನೂ ಗಿಟ್ಟುವುದಿಲ್ಲ, ಏನಾದರೂ ಬೇರೆ ಕೆಲಸ ಮಾಡಲೇಬೇಕು ಎನ್ನುವ ಒತ್ತಡ, ಒತ್ತಾಯ. ಹಣ ಹುಟ್ಟುವಂಥ ಸಾವಿರಾರು ಉದ್ಯೋಗಾವಕಾಶಗಳನ್ನ ಒಬ್ಬೊಬ್ಬರೂ ಅವನ ಮುಂದೆ ಇಟ್ಟರು, ಮೆಡಿಕಲ್ ಸ್ಟೋರ್‌ನಲ್ಲಿನ ಕೆಲಸದ ಭವಿಷ್ಯ ಏನು ಅಂತ ಪ್ರಶ್ನೆ ಮಾಡಿದರು, ಎಷ್ಟು ದುಡಿದೆ ಅಂತ ಲೆಕ್ಕ ಕೇಳಿದರು. ಮೆಡಿಕಲ್ ಸ್ಟೋರ್‌ನಲ್ಲಿ ಇರುತ್ತಾ ಆಗಲೇ ಹೆಚ್ಚುಕಡಿಮೆ ಅಸ್ತಮಾ ಓಡಿ ಹೋಗಿ ಹುಷಾರಾಗಿದ್ದ ಕತೆಯನ್ನು ಹೇಳಬೇಕೆನ್ನಿಸಿತಾದರೂ ರಾಹುಲ ಬಾಯಿ ಬಿಡಲಿಲ್ಲ. ಯಾಕೋ ಮನೆಯಲ್ಲಿ ಉಸಿರು ಕಟ್ಟಿದ ಹಾಗಾಯಿತು ರಾಹುಲನಿಗೆ.


ಆ ಕಡೆ ಅಪ್ಪನ ವಿರೋಧ ಇದ್ದಾಗಲೂ ಕ್ಲೀನಿಂಗ್ ಕೆಲಸದ ನಾಟಕ ಪ್ರಾರಂಭಿಸಿದ ಪ್ರದೀಪ, ದುರಸ್ತಿಗೋಸ್ಕರ ತಾತ್ಕಾಲಿಕವಾಗಿ ಸ್ಟೋರನ್ನು ಮುಚ್ಚಲಾಗಿದೆ ಅಂತ ಹೊರಗೆ ವಿನಾಯಿಲ್ ಹಾಕಿಸಿದ. ಕ್ಲೀನಿಂಗ್ ಆಗಿದ್ದರೆ ಜಶ್, ಕೊಸ್ ಅಂತ ಸದ್ದು ಹೊರಡಬೇಕಿತ್ತು. ಆದರೆ ಸುತ್ತಮುತ್ತಲಿನವರ ಕಿವಿ ತೂತಾಗುವಂತೆ ಸ್ಟೋರ್ ಒಳಗೆ ಕಟಕಟ ಕುಟ್ಟುವ ತುಂಬಾ ಸದ್ದು ಕೇಳಿಬರುತ್ತಿತ್ತು, ಆಗಾಗ ನೆಲ ಅಲುಗಾಡುತ್ತಿತ್ತು. ಪಕ್ಕದಲ್ಲೇ ಇರುವ ಪೇರಲೆ ಮರ ಅಲುಗಾಡಿ ಅಲುಗಾಡಿ ಬೇರು ಸಡಿಲವಾಗಿತ್ತು. ಬೆಳಿಗ್ಗೆ ಎದ್ದಾಗ ತನ್ನ ಮನೆ ಕಟ್ಟೆಗೆ ಬಡಿದು ಬಿದ್ದುಕೊಂಡಿರುವ ಒಂದು ಚೂರು ಕಲ್ಲು ನೋಡಿದಾಗಲೇ ಇದು ತನ್ನ ಮೆಡಿಕಲ್ ಸ್ಟೋರ್‌ನ ಅವನತಿಯ ಒಂದು ಭಾಗ ಅಂತ ಸುಧಾಕರನಿಗೆ ಹೊಳೆದಿದ್ದು. ಪ್ರದೀಪ ಪೊಲೀಸರಿಗೆ ಹೆದರುವ ಕಾಲ ಯಾವತ್ತೋ ಮುಗಿದಿತ್ತು, ಮಗನಂತಿದ್ದ ರಾಹುಲನೂ ಊರಿಗೆ ಹೋದ ಕಾರಣ ಡಿಂಗ್ರಿ ಸುಧಾಕರ ಅಸಹಾಯಕತೆಯಿಂದ ಕೂರಬೇಕಾಗಿ ಬಂತು. ಸರಿಯೋ, ತಪ್ಪೋ ಆಗಾತ ಮಾಡಿದ ಮೊದಲ ಕೆಲಸ ರಾಹುಲನಿಗೊಂದು ಫೋನು ಮಾಡಿದ್ದು.

***

ಒಳಗೆ ಬಂದು ನೋಡಿದರೆ ಗೊತ್ತಾಗುತ್ತಿತ್ತು. ಇಡೀ ಮೆಡಿಕಲ್ ಸ್ಟೋರ್ಸ್‌ನ ಮೂಲೆ ಮೂಲೆಗಳು ಕಲ್ಲ ಚೂರುಗಳಿಂದ ತುಂಬಿಹೋಗಿದ್ದವು. ಔಷಧಿ ಮಾತ್ರೆಗಳೆಲ್ಲಾ ಕೆಲವು ಜಜ್ಜಿ, ಕೆಲವು ದ್ರವರೂಪದಲ್ಲಿ ಹೊರಬಂದು ಒಳಗಡೆ ರಾಡಿ ಆಗಿತ್ತು. ಕೆಲಸ ಮಾಡುವವರ ಕಾಲುಗಳಿಗೆಲ್ಲಾ ಚಪ್ಪಲಿ ಇದ್ದರೂ ಗಾಜು ಹೊಕ್ಕುತ್ತಿತ್ತು. ಹಾಗಾಗಿ ಹರಿದದ್ದು ಔಷಧಿಯೋ ಕೆಂಪು ಸಿರಪ್ಪು, ಔಷಧಿ ದ್ರವವೋ, ರಕ್ತವೋ ಗೊತ್ತಾಗುತ್ತಿರಲಿಲ್ಲ. ಒಂದು ಕಡೆಯಲ್ಲಿ ಕಲ್ಲುಗಳನ್ನು ಪೇರಿಸಿ ಪೇರಿಸಿ ಇಡಲಾಗಿತ್ತು. ಆದರೆ ರಾಹುಲ ಪ್ರತಿದಿನ ಧೂಪ ಹಚ್ಚುತ್ತಿದ್ದ ತಿರುಪತಿ ತಿಮ್ಮಪ್ಪ ಮಾತ್ರ ಒಂದು ಮೂಲೆಯಲ್ಲಿ ಕುಳಿತು ಇದನ್ನೆಲ್ಲಾ ನೋಡಿ ನಗುತ್ತಿದ್ದ. ಪ್ರದೀಪ ಹೋಗೀಬಂದೂ ಒಳ್ಳೆಯ ವ್ಯಾಪಾರ ಮಾಡಿಕೊಡಪ್ಪಾ, ಒಂದೊಳ್ಳೆ ಮನೆ ಕಟ್ಟಿಸಬೇಕು, ಅದರಲ್ಲಿ ಮೂರು ಹೊತ್ತೂ ಇಸ್ಪೀಟು, ಎಣ್ಣೆ, ಸಿಗರೇಟು ಸಿಗಬೇಕು. ಅರಮನೆ ಕಟ್ಟಿಸ್ತೀನಿ ಅರಮನೆ, ಅದರಲ್ಲೊಂದು ದೇವರ ಕೋಣೆ ನಿನಗೆ ಸಿಗೋದಿಲ್ಲವಾ ಅಂತ ಹೇಳುತ್ತಿದ್ದ. ಒಳಗಿನ ಕಲ್ಲುಗಳನ್ನೆಲ್ಲಾ ಕಿತ್ತಿಟ್ಟರೂ ಯಾವ ಕಾರಣಕ್ಕೂ ಪಾಯಕ್ಕೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದ. ತನ್ನ ತಂದೆ ಕಟ್ಟಿಸಿದ ಈ ಸ್ಟೋರ್ಸನ್ನು ಕೆಡವಿ ಹೋಗುವುದು ಅವನ ಉದ್ದೇಶವಾಗಿರಲಿಲ್ಲ. ತನಗೆ ಬೇಕಾದಷ್ಟು ಕಲ್ಲು ಕಿತ್ತುಕೊಂಡ ಮೇಲೆ ಅಪ್ಪನಿಗೆ ಅಂಗಡಿ ಬಿಟ್ಟುಕೊಡುವ ಮಹತ್ತರ ಉದ್ದೇಶವೂ ಪ್ರದೀಪನಿಗೆ ಇತ್ತು.

ಕಿತ್ತಿಟ್ಟ ಕಲ್ಲುಗಳನ್ನು ಹೊತ್ತೊಯ್ಯಲು ರಾತ್ರಿ ನಂಜುಂಡಸ್ವಾಮಿ ಟಂಟಂ ತರುತ್ತೇನೆ ಅಂತ ಹೇಳಿದ್ದ. ಕಲ್ಲನ್ನೆಲ್ಲಾ ಅದಕ್ಕೆ ಸಾಗಿಸಿ, ಎಲ್ಲರಿಗೂ ಹಣ ಬಟವಾಡೆ ಮಾಡಿ, ಟಂಟಂ ಏರಿ ಹೊರಟರೆ ಮತ್ತೆ ಊರಿಗೆ ಕಾಲಿಡುವುದಿಲ್ಲ ಅಂತ ಕೆಲಸದವರ ಜೊತೆ ಹೇಳಿಕೊಂಡಿದ್ದ ಸಹ.

ಅವತ್ತು ಮಂಗಳವಾರ. ಸುಮಾರು ಹತ್ತೂವರೆ ಹೊತ್ತಿಗೆ, ಜನ ಮನೆ ಸೇರಿಕೊಂಡ ಮೇಲೆ ನಂಜುಂಡಸ್ವಾಮಿ ಟಂಟಂ ತಂದು ಅಂಗಡಿ ಮುಂದೆ ನಿಲ್ಲಿಸಿ ಹೋಯ್ ಅಂತ ಸಣ್ಣಗೆ ಕೂಗು ಹೊಡೆದ. ಒಳಗಿನ ಪ್ರದೀಪನಿಗೆ ಟಂಟಂ ಬಂದ ಸೂಕ್ಷ್ಮ ಅರ್ಥವಾಯಿತು. ಆಚೆ ಬಂದು, ತುಟಿ ಮೇಲೆ ಬೆರಳಿಟ್ಟು ಸುಮ್ಮನೆ ಕೂತುಕೋ, ಎಂಜಿನ್ನು ಸ್ಟಾರ್ಟ್ ಮಾಡೋದು ಬೇಡ, ಯಾವ ಕಾರಣಕ್ಕೂ ಲೈಟ್ ಹಾಕೋದು ಬೇಡ ಅಂದ. ಆಹೊತ್ತಿಗೆ ಎಲ್ಲಿ ಯಾವ ಲೈನ್ ಮೆನ್ ರಿಪೇರಿಗೆ ಅಂತ ಕರೆಂಟು ತೆಗೆದು ಬಿಟ್ಟನೋ, ಊರಿಗೆ ಊರೇ ಕತ್ತಲಾವರಿಸಿಬಿಟ್ಟಿತು. ಏಯ್ ಹುಷಾರೋ, ಏಯ್, ನನ್ನ ಕಾಲ ಮೇಲೆ ಹಾಕಿದ್ಯಲ್ಲೋ, ಅಮ್ಮ ಅಯ್ಯೋ ಅಂತ ಒಳಗಡೆ ವಿವಿಧ ಜನರ ವಿವಿಧ ದನಿಯ ರೋದನೆಗಳು ಶುರುವಾದವು. ಮೆತ್ತಗೆ, ಕೂಕ್ಕೋಬೇಡಿ ಅಂತ ಪ್ರದೀಪ್ ಮೆತ್ತಗೆ ಗದರಿದ. ಯಾವ ಮುಖ ಯಾರದು, ಯಾರ ಕೈಲಿರುವ ಯಾವ ಕಲ್ಲಿಗೆ ಸಿರಿವಂತನ ಈಜುಕೊಳದ ಕಲ್ಲಾಗುವ ಯೋಗ್ಯತೆ ಇದೆ ಅಂತ ತಿಳಿಯದಂತೆ ತಪ್ಪು ತಪ್ಪು ಹೆಜ್ಜೆಗಳ ಪಲ್ಲಕ್ಕಿ ಮೇಲೆ ಟಂಟಂ ಕಡೆಗೆ ಕಲ್ಲುಗಳು ಹೊರಡತೊಡಗಿದವು. ಏನೋ ಸದ್ದಾಗುತ್ತಿದೆ ಅಂತ ಗೊತ್ತಾಗಿ ಹತ್ತಿರದಲ್ಲೇ ಇದ್ದ ಸುಧಾಕರ ಹೊರಗೋಡಿ ಬಂದ. ಪಿಸುಮಾತು, ಜನಸಂಚಾರದ ಸೂಚನೆ ಸಿಗುತ್ತಿದ್ದಂತೆ ಯಾರ್ರೋ ಏನ್ರೋ ಅಂತ ಕೂಗುತ್ತಾ ಕೂಗುತ್ತಾ ಧಾವಿಸಿ ಬಂದ. ಏನು ಮಾಡುವುದೆಂದು ಗೊತ್ತಾಗದೇ ತಾನು ಸಾಗಿಸುತ್ತಿದ್ದ ಕಲ್ಲನ್ನೇ ಎತ್ತಿ ಸದ್ದು ಬಂದ ಕಡೆಗೆ ಪ್ರದೀಪ ಎಸೆದ.



ಅದು ಹೋಗಿ ಅಪ್ಪನಿಗೇ ಹೊಡೆಯಿತು. ಅಮ್ಮಾ ಅಂತ ಕೂಗುತ್ತಾ ಅಲ್ಲೇ ಡಿಂಗ್ರಿ ಸುಧಾಕರ ಕುಸಿದ. ಕಾಲಡಿಯಲ್ಲಿ ಏರುತ್ತಿರುವ ರಕ್ತದ ಮಡುವನ್ನು ನೋಡಲು ಕಣ್ಣಿಗೆ ಕತ್ತಲು ಕಟ್ಟಿಕೊಂಡ ಊರಿಗೆ ಸಾಧ್ಯವಾಗಲೇ ಇಲ್ಲ. ಟಂಟಂ ಚಾಲೂ ಮಾಡಿದ ಪ್ರದೀಪ ವಾಹನದ ಬೆಳಕಲ್ಲಿ ಬಿದ್ದ ಅಪ್ಪನನ್ನು ನೋಡಿದನಾದರೂ ಅದ್ಯಾವುದೋ ಭಯದಲ್ಲಿ ಎದೆ ಕಲ್ಲಾಗಿತ್ತು.

***

ಆ ರಾತ್ರಿ ದೇವರೇ ಕರೆಸಿಕೊಂಡಂತೆ ರಾಹುಲ್ ಬಂದನಂತೆ. ಆದರೆ ಆಸ್ಪತ್ರೆಗೆ ಕರೆದೊಯ್ಯಲು ಯಾವ ವಾಹನವೂ ಇರಲಿಲ್ಲ. ರಕ್ತ ಕಟ್ಟಿಸುವ ಔಷಧ, ಇಟ್ಟ ಜಾಗದಲ್ಲಿ ಸಿಗದೇ ಕತ್ತಲಲ್ಲಿ ರಾಹುಲ ತುಂಬ ಹೊತ್ತು ತಡಕಾಡುತ್ತಿದ್ದನಂತೆ. ಸುಧಾಕರಣ್ಣ ಕಟ್ಟಿಸಿದ ಮೆಡಿಕಲ್ ಸ್ಟೋರ್ಸ್‌ನಲ್ಲಿ ಸ್ವತಃ ಅವರ ರಕ್ತ ಕಟ್ಟಿಸುವ ಮೆಡಿಸಿನ್ನು ನನ್ನ ಕೈಲಿ ಹುಡುಕಿ ಕೊಡಲಾಗಲಿಲ್ಲ ಅಂತ ರಾಹುಲ ಸುಧಾಕರನ ಹೆಣದ ಮುಂದೆ ತುಂಬ ಹೊತ್ತು ಗೋಳಾಡುತ್ತಿದ್ದ. ■